**ಓ.ಎಸ್ ನಂಃ 263/2011** **ಪಿ.ಡಬ್ಲ್ಯೂ-4**

**<u>ದಿನಾಂಕಃ 09-01-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುರಿದ ಪಾಟೀ ಸವಾಲುಃ ಪ್ರತಿವಾದಿ 1, ಮತ್ತು 3 ರವರ ಪರ ಶ್ರೀ. ಆರ್.ವಿ.ಎನ್.ಕೆ. ವಕೀಲರಿಂದಃ</u>**

ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದಂತೆ 1964 ರ ಪಹಣಿ ಪತ್ರಿಕೆ ನನ್ನ ಹತ್ತಿರ ಇರುವುದಿಲ್ಲ. ಸಾಕ್ಷಿ ಮುಂದುವರಿದು ಅದು 1971 ರಿಂದ ನನ್ನ ಹತ್ತಿರ ಇರುತ್ತದೆ. ದಾವಾ ಐಟಂ ನಂ.1 ರ 1964 ರ ಪಹಣಿ ಪತ್ರಿಕೆ ಈಗ ಲಭ್ಯವಿರುವುದಿಲ್ಲ. ನಾನು ತಹಶೀಲ್ದಾರರಿಗೆ 1964 ರಿಂದ ದಾವಾ ಐಟಂ ನಂ.1 ರ ಪಹಣಿ ನೀಡುವಂತೆ ಹೇಳಿರುತ್ತೇವೆ. ಆದರೆ ಅವರು 1971 ರಿಂದ ನೀಡಿರುತ್ತಾರೆ. ನಾನು 1971 ರ ಪಹಣಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-1 ರಲ್ಲಿ ಬರೆದ ಹೆಸರುಗಳು 1971 ರ ಪಹಣಿ ಪತ್ರಿಕೆಯಲ್ಲಿ ಬರೆಯಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಪಹಣಿ ನೋಡಬೇಕಾಗುತ್ತದೆ ಎಂದು ಹೇಳುತ್ತಾರೆ. ನಿಪಿ-2 ಪಹಣಿ ಪತ್ರಿಕೆಯಲ್ಲಿ ತುಳಸಿಬಾಯಿ, ವೆಂಕಟರಮಣಪ್ಪ, ಪ್ರಾಣೇಶಚಾರ್ಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ವೆಂಕಟರಮಣಪ್ಪ ಬಿನ್ ಮೋಟಪ್ಪ ಅವರು ಬೇರೆ ವ್ಯಕ್ತಿಯಾಗಿರುತ್ತಾರೆ. ಅವರಿಗೆ 1 ಎಕರೆ 19 ಗುಂಟೆ ಜಮೀನು ನಿಪಿ-2 ರಂತೆ ತೋರಿಸಲಾಗಿರುತ್ತದೆ. ನಿಪಿ-1 ಮತ್ತು 2 ರ ಕಾಲಂ ನಂಬರ 9 ರಲ್ಲಿ ಮೂಲ ಮಾಲೀಕರ ಹೆಸರು ಇರುತ್ತವೆ ಎಂದರೆ ಸರಿ. ನಿಪಿ-3 ಮತ್ತು 4 ರಲ್ಲಿ ತುಳಸಿಬಾಯಿ ವೆಂಕಟರಮಣಪ್ಪ ರವರ ಹೆಸರು ಇರುತ್ತವೆ ಎಂದರೆ ಸರಿ. ನಿಪಿ-1 ರಿಂದ 4 ರಲ್ಲಿ ತುಳಸಿಬಾಯಿ ರವರ ಪಿತ್ರಾರ್ಜಿತ ಆಸ್ತಿ ಎಂದು ಬರೆಯಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ತುಳಸಿಬಾಯಿ ರವರಿಗೆ ಯಾವ ರೀತಿ ಆಸ್ತಿ ಬಂತು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಿಂದ 4 ರಲ್ಲಿ ಖಾತೆ ಸಂಖ್ಯೆ 17 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಖಾತೆ ಸಂಖ್ಯೆಯಂತೆ ತಹಶೀಲ್ದಾರ ಪಟ್ಟಾ ಪುಸ್ತಕ ನೀಡುತ್ತಾರೆ ಎಂದರೆ ಸರಿ. ನಿಪಿ-1 ರಿಂದ 4 ರಲ್ಲಿ ಅವರೇ, ಜೋಳ, ರಾಗಿ ಎಂದು ಬೆಳೆಯ ವಿವರ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ವಾರ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಾತ ವಾರ ಮಾಡುತ್ತಿರಲಿಲ್ಲ. ವೆಂಕಟರಮಣಪ್ಪ ವಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಾತನ ಹೆಸರು ಮುನಿಶಾಮಪ್ಪ. ನನ್ನ ತಾತನ ಹೆಂಡತಿ ಹೆಸರು ಗೌರಮ್ಮ.

ನನ್ನ ತಾತನಿಗೆ ಮೂರು ಜನ ಮಕ್ಕಳು. ಅವರೇಂದರೆ (1) ವೆಂಕಟಮ್ಮ, (2) ನನ್ನ ತಂದೆ ವೆಂಕಟಪ್ಪ, (3) ಕೆಂಪಮ್ಮ. ವೆಂಕಟಮ್ಮ ನನಗೆ ಸೋದರ ಅತ್ತೆ ಆಗಬೇಕು. ಅಬ್ಬಯ್ಯಪ್ಪ ವೆಂಕಟಮ್ಮಳ ಗಂಡ ಎಂದರೆ ಸರಿಯಲ್ಲ. ನನ್ನ ಅತ್ತೆ ವೆಂಕಟಮ್ಮಳಿಗೆ ಒಬ್ಬ ಮಗ ಗೋಪಾಲಪ್ಪ ಇರುತ್ತಾರೆ. ಗೋಪಾಲಪ್ಪನ ಮಗ ಈ ದಾವೆಯ 5 ನೇ ಪ್ರತಿವಾದಿ ಬಾಬು ಎಂದರೆ ಸರಿ. ನನಗೆ ಸಂಬಂಧದಲ್ಲಿ ಈ ದಾವೆಯ 5 ನೇ ಪ್ರತಿವಾದಿ ಬಾಬು ಮಾವನಾಗಬೇಕು. ವೆಂಕಟರಮಣಪ್ಪ ಲ್ಯಾಂಡ್ ಟ್ರಿಬ್ಯೂನಲ್ ಗೆ ಅರ್ಜಿ ಸಲ್ಲಿಸಿದ್ದು ಅವರಿಗೆ 01 ಎಕರೆ 19 ಗುಂಟೆ ಜಮೀನು ಮಂಜೂರಾಗಿರುತ್ತದೆ. ದಿಃ- 01-03-1973 ರಲ್ಲಿ ಕಾಯ್ದೆ ಬಂದ ನಂತರ ವೆಂಕಟರಮಣಪ್ಪ ಲ್ಯಾಂಡ್ ಟ್ರಿಬ್ಯೂನಲ್ ಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಜೇರಾಕ್ಸ ದಾಖಲೆ ತೋರಿಸಲಾಗಿ ಅದು ವೆಂಕಟರವಣಪ್ಪ ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಅರ್ಜಿ ಎನ್ನುವ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವೆಂಕಟರಮಣಪ್ಪ ಭೂ ನ್ಯಾಯ ಮಂಡಳಿಗೆ ಸರ್ವೆ ನಂ.16/3, 16/2, 16/4 ಗೇಣಿ ಮಾಡುತ್ತಿದ್ದೇನೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ಕ್ಕೆ ತುಳಸಿಬಾಯಿ ಮಾಲೀಕರಾಗಿದ್ದರು. 5 ನೇ ಪ್ರತಿವಾದಿ ತಂದೆಗೆ ಗೋಪಣ್ಣ ಮತ್ತು ಗೋಪಾಲಪ್ಪ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಗೋಪಾಳಪ್ಪ ಎಂದು ಕರೆಯುತ್ತಾರೆ. ದಿಃ- 17-10-1981 ರಂದು ವೆಂಕಟರಣಪ್ಪ ಭೂ ನ್ಯಾಯ ಮಂಡಳಿ ಮುಂದೆ ದಾವಾ ಐಟಂ ನಂ.1 ರ ಉತ್ತರ ದಿಕ್ಕಿಗೆ 5 ನೇ ಪ್ರತಿವಾದಿ ತಂದೆ ಗೋಪಾಳಪ್ಪ ವಾರ ಸಾಗುವಳಿ ಮಾಡುತ್ತಿದ್ದಾರೆಂದು ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರಲ್ಲಿ 1981 ರಿಂದ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಅದರಲ್ಲಿ 5 ನೇ ಪ್ರತಿವಾದಿ ತಂದೆ ಗೋಪಾಳಪ್ಪ ಗೇಣಿದಾರನಾಗಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 1971 ರಿಂದ ನಾವೇ ದಾವಾ ಐಟಂ ನಂ.1 ರಲ್ಲಿ ಇಲ್ಲಿಯವರೆಗೆ ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನಮಗೆ ಮತ್ತು ವೆಂಕಟರಮಣಪ್ಪ ಬಿನ್ ಮೋಟಪ್ಪನವರಿಗೆ ಯಾವುದೇ ಮನಸ್ತಾಪ ಇರುವುದಿಲ್ಲ. ಗೋಪಾಳಪ್ಪ 1981 ರಲ್ಲಿ ಅರ್ಜಿ ಸಲ್ಲಿಸಿರುವುದು ನನಗೆ ಗೊತ್ತಿಲ್ಲ. ನಮಗೆ ಮತ್ತು ಗೋಪಾಳಪ್ಪನಿಗೆ ಯಾವುದೇ ಮನಸ್ತಾಪ ಇರುವುದಿಲ್ಲ.

ನಾನು ನ್ಯಾಯಾಲಯಕ್ಕೆ ನಿಪಿ-11 ರಂತೆ ಪಟ್ಟಾ ಬುಕ್ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ-11 ರ ಪುಟ ಸಂಖ್ಯೆ 15 ರಲ್ಲಿ ದಿನಾಂಕಃ- 17-02-1976 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದರಲ್ಲಿ ಮೈಸೂರು ಸರ್ಕಾರ ಎಂದು ನಮೂದಾಗಿರುತ್ತದೆ ಎಂದರೆ ಸರಿ. 1976 ರ ಮೈಸೂರು ಸರ್ಕಾರ ಇರಲಿಲ್ಲ ಕರ್ನಾಟಕ ಸರ್ಕಾರ ಇದ್ದು ನಾವು ನಿಪಿ-11 ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ- 01-11-1973 ರಂದು ಕರ್ನಾಟಕ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಪಟ್ಟಾ ಪುಸ್ತಕಕ್ಕೆ ಕಂದಾಯ ಇಲಾಖೆ ಯವರು ಸಹಿ ಮಾಡಿ ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-11 ಕ್ಕೆ ಅಧಿಕಾರಿಯ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸರಿ. ನಿಪಿ-11 ರ ಪಟ್ಟಾಪುಸ್ತಕದಲ್ಲಿ ಪುಟ ಸಂಖ್ಯೆ 15 ಕ್ಕೆ ಮಾತ್ರ ಬರವಣಿಗೆ ಇರುತ್ತದೆ ಬೇರೆ ಪುಟಗಳಿಗೆ ಬರವಣಿಗೆ ಇರುವುದಿಲ್ಲ ಎಂದರೆ ಸರಿ. ಪಟ್ಟಾ ಪುಸ್ತಕದಲ್ಲಿ ಬರೆದ ಸೂಚನೆಗಳು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪಟ್ಟಾ ಪುಸ್ತಕದ ಸೂಚನೆ 1 ರಂತೆ ಪ್ರತಿ ವರ್ಷ ಕಂದಾಯ ಕಟ್ಟಬೇಕು ಎಂದು ನಿಯಮ ಇರುತ್ತದೆ ಎಂದರೆ ಸರಿ. ಕಂದಾಯ ಪಾವತಿಸಿರುವ ಬಗ್ಗೆ ರಶೀದಿಗಳು ನನ್ನ ತಂದೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ನನಗೆ ಗೊತ್ತಿಲ್ಲ. ನಿಪಿ-11 ರ ಪುಟ ಸಂಖ್ಯೆ 7 ರಲ್ಲಿ ಕಬ್ಜೆ ಮತ್ತು ಸ್ವಾಧೀನಾನುಭವದಲ್ಲಿರುವ ವಿವರ ಎಂದು ನಮುದಾಗಿರುತ್ತದೆ ಎಂದರೆ ಸರಿ. ನಿಪಿ-11 ರ ಪುಟ ಸಂಖ್ಯೆ 7 ರಲ್ಲಿ ಕಬ್ಜೆ ಅನುಭವ ಮತ್ತು ಅವರ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ-11 ರ ಪುಟ ಸಂಖ್ಯೆ 7 ರಲ್ಲಿ ಹಕ್ಕು ಮತ್ತು ಸ್ವತ್ತಿನ ಸ್ವರೂಪ ಸ್ವಾಧೀನ ಅವಧಿ ಯಾರದೇ ಹೆಸರಿಗೆ ನಮೂದಾಗಿರುದಿಲ್ಲ ಎಂದರೆ ಸರಿ. ನಿಪಿ-11 ರಲ್ಲಿ ಪುಟ ಸಂಖ್ಯೆ 3 ರಿಂದ 8 ಖಾಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಿಪಿ-11 ರ ಪುಟ ಸಂಖ್ಯೆ 13 ರಲ್ಲಿ ವಿವರಗಳು ನಮೂದಾಗಿರುತ್ತವೆ ಎಂದು ಹೇಳುತ್ತಾರೆ. ನಿಪಿ-11 ರ ಪುಟ ಸಂಖ್ಯೆ 13 ರಲ್ಲಿ ಹಣ ಕೊಟ್ಟವರ ಹೆಸರು ನಮ್ಮ ತಂದೆಯವರದ್ದಾಗಿರುತ್ತದೆ. ಅದು 1971 ರಲ್ಲಿ ನಮೂದಾಗಿರುತ್ತದೆ. ನಿಪಿ-23 ನಾವು ಹಾಜರುಪಡಿಸಿದ ದಾಖಲೆ ಎಂದರೆ ಸರಿ. ಅದು ದಿಃ- 13-11-1962 ರಲ್ಲಿ ಬರೆದ ಪತ್ರ ಎಂದರೆ ಸರಿ. ನಿಪಿ-23 ರಲ್ಲಿ ಪ್ರಾಣೇಶಾಚಾರ್ಯ ನನ್ನ ತಾತ ಮುನಿಶಾಮಪ್ಪನಿಗೆ ಕಂದಾಯ ಕಟ್ಟಿದ ರಶೀದಿಗಳನ್ನು

ತರುವಂತೆ ಪತ್ರ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಮತ್ತು ಪ್ರಾಣೇಶಾಚಾರ್ಯ ರವರಿಗೆ ಏನು ವ್ಯವಹಾರ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೋಸ್ಟಲ್ ಲೆಟರ್ ಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಈಗಿನ ವಕೀಲರು ನಿಪಿ-23 ಪೋಸ್ಟ ಲೆಟರನ ವಿಚಾರಗಳು ಓದಿ ನನಗೆ ತಿಳಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**
**ಸಹಿ/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**